ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎಸ್‌ಎಸ್ — ೧೯

೩ನೇ ವರ್ಷ ೧೨ನೇ ಸಂಚಿಕೆ ಕೊಪ್ಪ ೨೮-೧೦-೯೮೪ ಭಾನುವಾರ ಬೆಲೆ ೪೦ ಪೈಸೆ

"ವೈಕುಂಠಪುರಕ್ಕೆ ಹೆಣ್ಣು ಕೊಡಬೇಡಿ"

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: "ವೈಕುಂಠಪುರಕ್ಕೆ ಹೆಣ್ಣು ಕೊಡಬೇಡಿ"—ಇದು ಇಲ್ಲಿಗೆ ಸಮೀಪದ ವೈಕುಂಠಪುರದ ನೀರಿನ ಬವಣೆ ನೋಡಿ ಹಿಂದಿನವರು ಮಾಡಿಟ್ಟ ಗಾದೆ. 'ಇದನ್ನು ಸುಳ್ಳು ಮಾಡುತ್ತೇನೆ' ಎಂದ ರಾಮಯ್ಯ ಅರ್ಧದಲ್ಲಿ ಸೋತರು. ಗೌಡರು ಗೆದ್ದು ಬಂದು ೩ ವರ್ಷಗಳಿಂದ ಬಾಕಿಯಿದ್ದ ಕೆಲಸವನ್ನು ಮುಗಿಸಿ; ಅಂತೂ ನೀರು ಬರಲು ಶುರುವಾಯಿತು. ಅಂತ ಸಂತೋಷ ಪಡುವಷ್ಟರಲ್ಲಿ—ಪುನಃ ಒಂದು ಸಣ್ಣ ವಿಶೇಷ ಘಟಿಸಿತು!

ಸಂಬಂಧಪಟ್ಟವರಿಗೆಲ್ಲ ತಿಳಿಸಿ ಆಯಿತು. ಈಗ ತಿಂಗಳ ಹಿಂದೆ ಪತ್ರಿಕೆಗೂ ಬರೆದಾಯಿತು. ಇದರ ಪರಿಣಾಮ—ನಾಳೆ, ನಾಡಿ ಎಂದು ಕಳೆದ ಪಿ.ಹೆಚ್.ಇ. ಇಂಜಿನಿಯರ್ ದೇವರಾಜ್ ಎಂಬ ಮಹಾಶಯರು ಒಂದೆರಡು ಸಾರಿ ಬಂದು ಹೋಗಿ "ಕೆ.ವಿ.ಎಂ. ನವರ 'ಫಾಲ್ಟ್' ಇದೆ" ಎಂದರು. ಅವರು ಬಂದು, ಲೈನ್ ಪರಿಶೀಲಿಸಿ ಎಲ್ಲ ಸರಿ ಇದೆ ಎಂದರು.

ಅವರು–ಇವರು ಸೇರಿ ಅಂತೂ ಜನ ನೀರು ಕುಡಿದದ್ದು ೧೦೦೦ ಅಡಿ ಕೆಳಗೆ ಹರಿಯುವ ತುಂಗೆಯಿಂದ!

ಈಗ ಜನ, ನಮಗೆ ತುಂಗೆಯ ನೀರೇ ಶಾಶ್ವತ ಎಂಬ ತೀರ್ಮಾನಕ್ಕೆ ಬಂದು. ಸರ್ಕಾರ ಖರ್ಚು ಮಾಡಿದ ೩ ಲಕ್ಷದಲ್ಲಿ ೩ ತಿಂಗಳು ನೀರು ಕುಡಿದು ಸಂತೃಪ್ತ(?)ರಾಗಿದ್ದಾರೆ.

ಪಾಪ, ಇಲ್ಲಿನ ವೈದಿಕ ಬ್ರಾಹ್ಮಣರಿಗೆ ದೇವರಾಜ್ "ಇದು ಯಾವಾಗಲೂ ಬಗೆಹರಿಯದ ಸಮಸ್ಯೆ. ಅದಕ್ಕೆ ಯಾವುದೋ ದುಷ್ಟ ಶಕ್ತಿಯ ಕಾಟ. ಅದಕ್ಕೆ ಕೋಳಿ ಎಲಿ ಅಗಬೇಕು" ಅಂದರಂತೆ. ಅದೂ ಆಯಿತು.

ಶಾಸಕರು ಕೂಡಲೇ ಪಿ.ಹೆಚ್.ಇ. ಇಂಜಿನಿಯರ್ ವಿರುದ್ಧ ಕ್ರಮ ಜರುಗಿಸಿ, ಸಮಸ್ಯೆ ಪರಿಹರಿಸಲಿ. ಇಲ್ಲದಿದ್ದರೆ, ಮೋಟರು, ಪೈಪು, ಮನೆ ಮುಂದಿನ ನಲ್ಲಿ ಎಲ್ಲ ಕೀಳಿಸಿಕೊಂಡು ಹೋಗಲಿ—ಎಂದು ಜನ ಕೊನೆಯದಾಗಿ ಗೋಗರೆದಿದ್ದಾರೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: ೨೬-೧೦-'೮೪

ಸರಕು: ೨೬೨೯ ರಿಂದ ೩೩೩೬

ಬೆಟ್ಟೆ: ೧೭೩೬ ರಿಂದ ೨೦೮೦

ಗೊರಬಲು: ೬೦೨ ರಿಂದ ೯೮೦

ಭದ್ರಾ ಮೇಲ್ದಂಡೆ, ಮಾಲತಿ ಯೋಜನೆಗಳಿಗೆ ಶಾಸಕರ ಕಟು ವಿರೋಧ

ಕೊಪ್ಪ: ಭದ್ರಾ ಮೇಲ್ದಂಡೆ ಯೋಜನೆ, ಮಾಲತಿ ಯೋಜನೆಗಳಿಗೆ ತಮ್ಮ ತೀವ್ರ ವಿರೋಧವಿದೆಯೆಂದು ಶಾಸಕ ಹೆಚ್. ಜಿ. ಗೋವಿಂದ ಗೌಡ 'ಮುಂಜಾವು'ಗೆ ತಿಳಿಸಿದ್ದಾರೆ.

ಸದ್ಯದಲ್ಲೇ (ಬಹುಶಃ ನ. ೫ರಿಂದ) ಆರಂಭವಾಗುವ ವಿಧಾನಸಭೆ ಅಧಿವೇಶನದಲ್ಲಿ ತಾನು ಈ ವಿಷಯ ಚರ್ಚೆಗೆ ಎತ್ತುವುದಾಗಿ ಅವರು ಹೇಳಿದ್ದಾರೆ.

"ಈ ವಿಷಯದಲ್ಲಿ ನಾನು ಮೌನವಾಗಿದ್ದೇನೆ, ನಿಷ್ಕ್ರಿಯನಾಗಿದ್ದೇನೆ–ಎಂಬ ಅಭಿಪ್ರಾಯ ತಪ್ಪು. ನನ್ನ ಕ್ಷೇತ್ರದಲ್ಲಿ ಜಮೀನು, ಕಾಡು ಅಪಾರವಾಗಿ ಮುಳುಗಡೆ ಆಗುವುದನ್ನು ನಾನು ಒಪ್ಪುವುದಿಲ್ಲ, ಸಹಿಸುವುದೂ ಇಲ್ಲ. ಇದರ ದುಷ್ಪರಿಣಾಮಗಳು ಎಷ್ಟೆಂದು ನನಗೂ ಗೊತ್ತು" ಎಂದಿದ್ದಾರೆ.

ಮುಜರಾಯಿ ಜಾಗ ಸ್ವಂತಕ್ಕೆ ಮಾಡಿಕೊಳ್ಳಲು ಕೊಪ್ಪ ಪುರಸಭೆ ಉಪಾಧ್ಯಕ್ಷರ ವಿಫಲ ಯತ್ನ

ಕೊಪ್ಪ: ಇಲ್ಲಿನ ಪುರಸಭಾ ಉಪಾಧ್ಯಕ್ಷ ನಾರಾಯಣ ಭಟ್ ಅವರು ಅಧ್ಯಕ್ಷರನ್ನು ತಪ್ಪುದಾರಿಗೆಳೆದು, ತಮ್ಮ ಮನೆಯಿರುವ ಮುಜರಾಯಿ ದೇವಸ್ಥಾನದ ಜಾಗವನ್ನು ತಮ್ಮ ಸ್ವಂತ ಹೆಸರಿಗೆ ಮಾಡಿಕೊಳ್ಳಲು ವಿಫಲ ಯತ್ನ ನಡೆಸಿದ ಸುದ್ದಿ ಗುಲ್ಲಾಗಿದೆ.

ಈ ಬಗ್ಗೆ ಪುರಸಭಾಧ್ಯಕ್ಷ ಮಂಜುನಾಥ ಶೆಟ್ಟಿ ಅವರನ್ನು ವಿಚಾರಿಸಿದಾಗ, ತಾವು ಅತಿಥಿಗಳ ಜೊತೆ ಮಾತಾಡುತ್ತ ತಲ್ಲೀನರಾಗಿದ್ದಾಗ ನಾರಾಯಣ ಭಟ್ ಬಂದು, "ಬ್ಯಾಂಕ್ ಸಾಲವೊಂದಕ್ಕೆ ಜಾಮೀನು ಬೇಕು" ಎಂದು ಹೇಳಿ ಪತ್ರವೊಂದಕ್ಕೆ ಸಹಿ ಹಾಕಿಸಿಕೊಂಡರು. ನಾಲ್ಕೈದು ದಿನದ ನಂತರ ಈ ಸುದ್ದಿ ಗೊತ್ತಾಗಿ, ಅವರನ್ನು ಕೂಡಲೇ ಸಬ್ ರಿಜಿಸ್ಟ್ರಾರ್ ಕಚೇರಿಗೆ ಕರೆದುಕೊಂಡು ಹೋಗಿ ನೋಂದಣಿ ರದ್ದು ಮಾಡಿಸಿದೆ ಎಂದರು.

ಅವರಿಗೆ ನಾರಾಯಣ ಭಟ್ ಒಂದು ಕ್ಷಮಾಪಣೆ ಪತ್ರ ಬರೆದು ಕೊಟ್ಟಿದ್ದು, ಅದರಲ್ಲಿ—"........ನಿವೇಶನವು ಮುಜರಾಯಿ ಸ್ಥಳವೆಂದು ಗೊತ್ತಿದ್ದೂ, ಪುರಸಭೆ ವ್ಯಾಪ್ತಿಗೆ ಸೇರಿದುದೆಂದು ಮಂಜೂರಾತಿ ಪಡೆದಿರುವುದು ಸುಳ್ಳಾಗಿರುತ್ತೆ. ನೀವು ನನ್ನ ಮೇಲೆ ನಂಬುಗೆಯಿಂದ ವಿಚಾರ ಮಾಡದೆ ಸಹಿ ಮಾಡಿರುತ್ತೀರಿ. ಜವಾಬ್ದಾರಿ ಸ್ಥಾನದಲ್ಲಿ ಕೊಪ್ಪ ಪುರಸಭಾ ಉಪಾಧ್ಯಕ್ಷನಾಗಿ ನಿಮ್ಮನ್ನು ತಪ್ಪು ದಾರಿಗೆ ಎಳೆದಿರುವುದರಿಂದ ನನ್ನಿಂದ ಸ್ಪಷ್ಟ ಅಧಿಕಾರ ದುರುಪಯೋಗ ಆಗಿರುತ್ತದೆ. ಈ ಬಗ್ಗೆ ನಿಮ್ಮಿಂದ ಕ್ಷಮಾಪಣೆ ಕೇಳುತ್ತೇನೆ." ಎಂದಿದ್ದಾರೆ.

ನಾರಾಯಣ ಭಟ್ ತಹಸೀಲ್ದಾರರ ಬಳಿಯೂ ಹೋಗಿ, ಸದರಿ ಜಾಗವನ್ನು ತಮಗೆ ಮಂಜೂರು ಮಾಡಿರುವುದಾಗಿ ಒಂದು ಪತ್ರ ಕೊಡಬೇಕೆಂದು ದುಂಬಾಲು ಬಿದ್ದಿದ್ದರೆಂದೂ ತಿಳಿದು ಬಂದಿದೆ.

ಅದಕ್ಕೂ ಹಿಂದೆ ಪುರಸಭೆ ಮುಖ್ಯಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಆ ಜಾಗ ತನಗೆ ಮಂಜೂರು ಮಾಡುವಂತೆ ಕೋರಿದ್ದು, ಕಾನೂನು ರೀತ್ಯಾ ಅದು ಸಾಧ್ಯವಿಲ್ಲವೆಂಬ ಉತ್ತರ ಪಡೆದಿದ್ದರೆನ್ನಲಾಗಿದೆ.

ಈ ಬಗ್ಗೆ ಕುಪಿತರಾದ ಪುರಸಭಾ ಸದಸ್ಯರುಗಳು ಅವರ ರಾಜೀನಾಮೆಗೆ ಒತ್ತಾಯಿಸಿದಾಗ, 'ಅಧ್ಯಕ್ಷರಿಗೆ ನನ್ನನ್ನು ನಂಬುವಂತೆ ನಾನು ಹೇಳಿರಲಿಲ್ಲ. ನಂಬಿ ಕಣ್ಮುಚ್ಚಿ ಸಹಿ ಹಾಕಿದ ಅವರೇ ಬೇಕಾದರೆ ರಾಜೀನಾಮೆ ಕೊಡಲಿ' ಎಂದರೆಂದು ಹೇಳಲಾಗಿದೆ.

ಸಿದ್ಧರಮಠ ಸುತ್ತ ಸುರಿತ ಕಳ್ಳರ ತಂಡ?

ಕೊಪ್ಪ: ಇಲ್ಲಿಗೆ ಸಮೀಪದ ಸಿದ್ಧರಮಠದ ಬಳಿ ಗಾಡಿಕೆರೆ ರಾಮಕೃಷ್ಣ ರಾವ್ ಎಂಬವರ ಮನೆಯಲ್ಲಿ ಈಚೆಗೆ ರಾತ್ರಿ ಕಳ್ಳತನದ ವಿಫಲ ಯತ್ನವೊಂದು ನಡೆಯಿತೆಂದು ತಿಳಿದುಬಂದಿದೆ. ಕಳ್ಳನೊಬ್ಬ ವಿದ್ಯುತ್ ಸಂಪರ್ಕ ಕಡಿದು ಹಾಕಿ, ನಿದ್ರಿಸಿದ್ದ ಕಾವಲುಗಾರನ ಬಳಿಯಿಂದ ಟಾರ್ಚನ್ನೂ, ಕೋವಿಯನ್ನೂ ಒಯ್ದು ಚಪ್ಪರವೇರಿದಾಗ ರಾಮಕೃಷ್ಣರಾವ್ ಅವರಿಗೆ ಎಚ್ಚರವಾಗಿ, 'ಯಾರು?' ಎನ್ನುತ್ತಾ ಬಾಗಿಲು ತೆಗೆದೊಡನೆ ಕಳ್ಳ ಬೆದರುಗುಂಡು ಹಾರಿಸಿದನೆಂದೂ, ಅದು ಕಲ್ಲಿಗೆ ಬಡಿದು ತಿರುಗಿ ಬಂದು ಗೋಡೆಗೆ, ಬಾಗಿಲಿಗೆ ಬಡಿಯಿತೆಂದೂ, ಅಷ್ಟರಲ್ಲಿ ಜನ ಸೇರಿದ್ದರಿಂದ ಕಳ್ಳ ಕತ್ತಲಲ್ಲಿ ಪರಾರಿಯಾದನೆಂದೂ ಹೇಳಲಾಗಿದೆ.

ಈಚೆಗೆಜೀಪಿನಲ್ಲಿ ಅಪರಿಚಿತರ್ಯಾರೋ ಶಿಕಾರಿಗೆ ಬಂದಹಾಗೆ ಬಂದಿದ್ದರು; ರಾತ್ರಿ ೩ ಗಂಟೆಸುಮಾರಿಗೆ ಮೋಟರ್ ಬೈಕು ಓಡಾಡುತ್ತಿತ್ತು—ನುಂತಾಗಿ ಊಹಾಪೋಹಗಳು ಹಬ್ಬುತ್ತಿದ್ದು, ಜನ ಭಯಗ್ರಸ್ತರಾಗುತ್ತಿದ್ದಾರೆನ್ನಲಾಗಿದೆ. ಆದರೆ ಈವರೆಗೂ ಪೋಲೀಸರಿಗೆ ಯಾವುದೇ ದೂರು ಬಂದಿ...

ಒಂದು ತಿಂಗಳು ಆಯಸ್ಸು ವೃದ್ಧಿಸಿದ ವೈದ್ಯೆ!

(ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಇಲ್ಲಿನ ಧನ್ವಂತರಿ ಆಸ್ಪತ್ರೆಯ ವೈದ್ಯೆ ಡಾ|| ವಿಜಯಲಕ್ಷ್ಮಿ ಅವರು ಅಚಾತುರ್ಯದಿಂದ ಎಂಟು ತಿಂಗಳ ಮಗುವೊಂದನ್ನು ಆಪರೇಶನ್ ಮೂಲಕ ಹೆರಿಗೆ ಮಾಡಿಸಿರುವ ಪ್ರಕರಣ ನಡೆದಿದೆ.

ತಿಳಿದು ಬಂದಿರುವಂತೆ, ಇಲ್ಲಿಗೆ ಸಮೀಪದ ಕಲ್‌ಕಟ್ಟೆಯ ಕಲ್ಲು ಕೆಲಸದ ಜಯರಾಮ ಎಂಬವರ ಪತ್ನಿ ೮ ತಿಂಗಳ ಗರ್ಭಿಣಿ ಮಂಜುಳ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರಿಗೆ ಹೆರಿಗೆ ನೋವು ಬರಿಸುವ ಇಂಜೆಕ್ಷನ್ ಕೊಟ್ಟರು. ನೋವು ಕಾಣಿಸದಿದ್ದಾಗ (ಪ್ರಕೃತಿ ನಿಯಮ ಭಗ್ನಗೊಳಿಸಿದ್ದು) "ಮಗು ಅಡ್ಡ ಇದೆ. ಆಪರೇಶನ್ ಮಾಡಬೇಕು" ಎಂದು ಹೇಳಿದರು. ಹಿಂದಿನ ದಿನವಷ್ಟೆ ಮದ್ರಾಸಿನ ಖ್ಯಾತ ಸರ್ಜನ್‌ರು ಬೇರೊಬ್ಬರಿಗೆ ಅಂಥದೇ ಆಪರೇಶನ್ ಮಾಡಿದ್ದರಂತೆ. ಅದನ್ನೇ ಅನುಕರಿಸಿದರು.

ಆದರೆ, ಆಪರೇಶನ್ ಮುಗಿದಾಗ, ಮಗುವಿಗೆ ಇನ್ನೂ ೮ ತಿಂಗಳು ಮಾತ್ರ ಎಂಬುದು ಗೊತ್ತಾಯಿತು. "ವಿಷಯ ಯಾರಿಗೂ ಹೇಳಬೇಡಿ" ಎಂದು ದಂಪತಿಗಳಿಗೆ ಹೇಳಲಾಯಿತು. ಮೊದಲು ೧ ಸಾವಿರ ರೂ. ಆಗುತ್ತೆ ಎಂದಿದ್ದ ಆಡಳಿತಾಧಿಕಾರಿ ಈಗ 'ಎಷ್ಟಿದೆಯೋ ಅಷ್ಟು ಕೊಡಿ' ಎಂದರಂತೆ.

ಈ ಬಗ್ಗೆ ವಿಚಾರಿಸಲು ಹೋದ ಈ ವರದಿಗಾರನಿಗೆ, ಅಲ್ಲಿನ 'ಸಂದರ್ಶಕ ವೈದ್ಯ' ವಿಠಲ ಶೆಟ್ಟಿ "ಆದದ್ದು ಹೌದು. ಇನ್ನು ಮುಂದೆ ಹೀಗಾಗದಂತೆ ಹೇಳುತ್ತೇನೆ..." ಎಂದರು.

ಈ ವೈದ್ಯೆ ಇದೇ ರೀತಿ ಗಡಿಬಿಡಿ ಮಾಡಿ ಇಂಥ ಹಲವು ಪ್ರಕರಣಗಳನ್ನು ಮಾಡಿದ್ದಾರೆನ್ನಲಾಗಿದೆ. ಗರ್ಭಿಣಿಗೆ ದಿನತುಂಬಿದೆಯೇ ಎಂಬುದನ್ನು ಪರೀಕ್ಷಿಸಿ ನಿರ್ಧರಿಸುವಷ್ಟು ತಿಳುವಳಿಕೆಯಾಗಲೀ ತಾಳ್ಮೆಯಾಗಲೀ ಇಲ್ಲವೆ

ಹಾಸನ — ಶೃಂಗೇರಿ ಮಧ್ಯೆ ಇನ್ನೊಂದು ಸರ್ಕಾರಿ ಬಸ್?

ಬಾಳೆಹೊನ್ನೂರು: ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಸನ–ಶೃಂಗೇರಿ ಮಧ್ಯೆ ಬದಲಿ ಬಸ್ಸೊಂದನ್ನು ಬಿಡಲು ಮುಂದೆ ಬಂದಿರುವುದಾಗಿ ವರದಿಯಾಗಿದೆ.

ಬೆಳಿಗ್ಗೆ ೬ಕ್ಕೆ ಹಾಸನದಿಂದ ಹೊರಟು ಶೃಂಗೇರಿಗೆ ಮಧ್ಯಾಹ್ನ ತಲುಪಿ, ಅಲ್ಲಿಂದ ಮಧ್ಯಾಹ್ನ ೩–೩೦ಕ್ಕೆ ಬಿಟ್ಟು ರಾತ್ರಿ ೯ಕ್ಕೆ ಹಾಸನ ತಲುಪುವ ಈ ಬಸ್ಸು ಕಾಫಿ ಸಂಶೋಧನಾ ಕೇಂದ್ರದ ಮಾರ್ಗ ಹೋಗಿಬರಲಿದೆ.

ಬಾಳೆಹೊನ್ನೂರು, ಜಯಪುರ ಸಾರ್ವಜನಿಕರು, ಅನೇಕ ಗ್ರಾಮ ಪಂಚಾಯ್ತಿಗಳವರು ಈ ಬಸ್ಸಿಗೆ ಖಾಯಂ ಪರವಾನಗಿ ನೀಡಲು ಒತ್ತಾಯಿಸಿದ್ದಾರೆ. ನವೆಂಬರ್ ೧೫ರಂದು ಸಭೆ ಸೇರುವ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು (ಆರ್.ಟಿ.ಎ.) ಈ ಬಸ್ಸಿಗೆ ಪರವಾನಗಿ ನೀಡುವಂತೆ ಇಲ್ಲಿನ ರಸ್ತೆ ಬಳಕೆದಾರರ ವೇದಿಕೆ ಸಾರ್ವಜನಿಕರ ಪರವಾಗಿ ಮನವಿ ಸಲ್ಲಿಸಿದೆ.

ಕೊಪ್ಪ: ಇಲ್ಲಿನ 'ಅಂಕುರ ಬಳಗ' ಈ ಸಲದ ಕನ್ನಡ ರಾಜ್ಯೋತ್ಸವದಲ್ಲಿ ಲಂಕೇಶರ 'ಪೋಲೀಸರಿದ್ದಾರೆ ಎಚ್ಚರಿಕೆ' ಎಂಬ ನಾಟಕ ಅಭಿನಯಿಸಲಿದೆ. ... ಸಪ್ತರ್ಷಿ ... 'ಅಕ್ಕಿ' ನಾಟಕವನ್ನು ... ದ್ದಾರೆ.

ಶೃಂಗೇರಿಯಲ್ಲಿ ಅಕ್ಟೋಬರ್ ೮ ಮತ್ತು ೯ರಂದು ನಡೆದ ಅಡಿಕೆ ಬೆಳೆ ಕುರಿತ ವಿಚಾರ ಸಂಕಿರಣ

— ಒಂದು ಸಮೀಕ್ಷಾ ವರದಿ

ಶೃಂಗೇರಿಯಲ್ಲಿ ಅಕ್ಟೋಬರ್ ೮ ಮತ್ತು ೯ರಂದು ನಡೆದ ಅಡಿಕೆ ಬೆಳೆಯ ಉತ್ಪಾದನೆ ಮತ್ತು ಸಂರಕ್ಷಣೆ ಕುರಿತ ವಿಚಾರ ಸಂಕಿರಣ ರೈತರಿಗೆ ಅಡಿಕೆ ಬೆಳೆ ಬಗ್ಗೆ ತಮ್ಮ ತಿಳುವಳಿಕೆ ಹೆಚ್ಚಿಸಿಕೊಳ್ಳಲು ಒಂದು ಅತ್ಯುತ್ತಮ ಅವಕಾಶವಾಗಿತ್ತು. (ಆದರೆ ಹಲವು ವಿಜ್ಞಾನಿಗಳು ಪೂರ್ತಿ ಇಂಗ್ಲೀಷಿನಲ್ಲಿ ಮಾಡಿದ ಭಾಷಣದ ಸಾರಾಂಶವನ್ನಾದರೂ ನುರಿತ ಭಾಷಾಂತರಕಾರರೊಬ್ಬರು ಕನ್ನಡದಲ್ಲಿ ಹೇಳುತ್ತಾ ಹೋಗಿದ್ದರೆ ಅದರ ಪ್ರಯೋಜನ ಇನ್ನೂ ಎಷ್ಟೋ ಪಟ್ಟು ಹೆಚ್ಚುತ್ತಿತ್ತು. ಅವರ ಇಂಗ್ಲಿಷ್ ಸಾಕಷ್ಟು ಸರಳವಾಗಿತ್ತಾದರೂ ಇಂಗ್ಲೀಷಿನ ಜೊತೆ 'ವ್ಯವಹರಿಸಿ' ಅಭ್ಯಾಸವಿಲ್ಲದ ರೈತರ ಪಾಲಿಗೆ ಅದು ತೊಡಕಿನದೇ.) ರೈತರು, ವಿಜ್ಞಾನಿಗಳು, ಅಧಿಕಾರಿಗಳು ತುಂಬಾ ಆತ್ಮೀಯರಾಗಿ ಕೂಡಿಕೊಂಡಿದ್ದು, ಸೌಹಾರ್ದಯುತ ವಾತಾವರಣ ರೈತರಿಗೆ ಸ್ವಲ್ಪ ಸಮಾಧಾನ ತಂದಿತೆನ್ನಬಹುದು. ಊಟ – ವಸತಿ ವ್ಯವಸ್ಥೆ, ಸಮಯಕ್ಕೆ ಸರಿಯಾಗಿ ವ್ಯವಸ್ಥಿತವಾಗಿ ನಡೆದ ಕಾರ್ಯಕ್ರಮಗಳು ಮೆಚ್ಚಿಗೆ ಪಡೆದವು.

ಪ್ರಖ್ಯಾತ ವಿಜ್ಞಾನಿಗಳು ಮತ್ತು ಸಂಶೋಧಕರುಗಳಾದ ಡಾ|| ಶ್ಯಾಮ ಭಟ್, ಡಾ|| ಅಭಿಚಿರನ್, ಡಾ|| ಕೃಷ್ಣಮೂರ್ತಿ, ಡಾ|| ವೀರೇಶ್, ಡಾ|| ಯರಗುಂಟಯ್ಯ, ಡಾ|| ಸಣ್ಣಮಾರಪ್ಪ, ಡಾ|| ಪಟ್ಟಣಶೆಟ್ಟಿ, ಡಾ|| ಚಂದ್ರಮೋಹನ್ ಮುಂತಾದವರಲ್ಲದೆ ಅಡಿಕೆ ಕೃಷಿಯ ಬಗ್ಗೆ ವಿಶಿಷ್ಟ ಪರಿಶ್ರಮವಿರುವ ಮತ್ತು ಸ್ವತಃ ಸಂಶೊಧನೆಗಳನ್ನು ನಡೆಸಿರುವ ಪ್ರಗತಿಪರ ಬೆಳೆಗಾರರಾದ ದೇವಂಗಿಯ ಪ್ರಫುಲ್ಲಚಂದ್ರ, ತೀರ್ಥಳ್ಳಿಯ ಡಿ.ಟಿ. ನಾಗೇಶ್, ಹೊಸಬಾಳೆ ಪ್ರಭಾಕರ ರಾವ್, ಹೇರೂರು ಅನಂತಪದ್ಮನಾಭಭಟ್, ಪಿ. ಜಿ. ಗುರ್ಜರ್ ಮುಂತಾದವರು ಮಾತನಾಡಿ, ತಮ್ಮ ಅನುಭವ, ಯೋಚನೆ, ಸಂಶೋಧನೆಗಳನ್ನು ರೈತರೊಡನೆ ಹಂಚಿಕೊಂಡರು. ತೀರ್ಥಳ್ಳಿ, ಸಾಗರ, ಶಿವಮೊಗ್ಗ, ಸಿರ್ಸಿ, ತರೀಕೆರೆ, ಚಿತ್ರದುರ್ಗ ತಾ||ಗಳಿಂದಲೂ ಕೆಲವು ರೈತರು ಪಾಲ್ಗೊಂಡಿದ್ದರು.

ವಿಚಾರ ಸಂಕಿರಣದಲ್ಲಿ ಮೂಡಿ ಬಂದ ವಿಚಾರಗಳ ಮುಖ್ಯಾಂಶಗಳು ಇಲ್ಲಿವೆ:—

ಬೋರ್ಡೋ ಮಿಶ್ರಣ

ಬೋರ್ಡೋ ಮಿಶ್ರಣಕ್ಕೆ (ಕೊಳೆ ಔಷಧಿ) ಉತ್ತಮ ಸುಣ್ಣ ಉಪಯೋಗಿಸಿ, ಈಗಿನಂತೆ ೧:೧ ಪ್ರಮಾಣದಲ್ಲೇ ತಯಾರಿಸಬೇಕು. ಮಳೆಯಲ್ಲಿ ತೊಳೆಯದಂತೆ ದಪ್ಪ ಮಾಡುತ್ತೇವೆಂದು ೨ ಕಿಲೋ – ೨ ಕಿಲೋ ಸುಣ್ಣ ಹಾಕುವುದು ದಂಡ. ರಾಳ, ಕೇಸ್ರಿ ಬದಲಿಗೆ ವಾಶಿಂಗ್ ಸೋಡ ಬಳಸಿದರೂ ಅಷ್ಟೇ ಪರಿಣಾಮವಿದೆ. ಖರ್ಚು ಬಹಳ ಕಮ್ಮಿಯಾಗುತ್ತದೆ.

ಮಿಶ್ರಣವನ್ನು ತಾಮ್ರದ ಪಾತ್ರೆ, ಮರದ ಪಾತ್ರೆ ಅಥವಾ ಸಿಮೆಂಟ್ ಬಾನಿಗಳಲ್ಲೇ ತಯಾರಿಸಬೇಕು. **ಕಬ್ಬಿಣದ ಪಾತ್ರೆಯಲ್ಲಿ ಮಾಡಲೇಬಾರದು.** ಮಾಡಿದರೆ ಅದರಿಂದ ರಾಸಾಯನಿಕ ಕ್ರಿಯೆ ನಡೆದು ಔಷಧಿಯ ಗುಣ ಹೊರಟು ಹೋಗುತ್ತದೆ, ನಿರುಪಯುಕ್ತವಾಗುತ್ತದೆ.

ಹಿಂದೆ ಇದ್ದ 'ಕೊಟ್ಟೆ' ಕಟ್ಟುವ ಕ್ರಮದ ಬಗ್ಗೆ ಪ್ರಯೋಗ ನಡೆಯುತ್ತಿದೆ. ಅಡಿಕೆ ಹಾಳೆಯ ಬದಲಿಗೆ ಉತ್ತಮವಾದ ಪ್ಲಾಸ್ಟಿಕ್ ಬಳಕೆ ಇನ್ನು ೩–೪ ವರ್ಷಗಳಲ್ಲಿ ಸಾಧ್ಯವಾಗಬಹುದು. (ಅಡಿಕೆ ಕೊನೆಗೆ 'ಕೊಡೆ ಹಿಡಿಯುವುದು' ಸಾಧ್ಯವಿಲ್ಲ.)

ಅಡಿಕೆ ಹರಳು ಉದುರುವುದು

ಪೊಟ್ಯಾಷ್ ಪೌಷ್ಟಿಕಾಂಶದ ಕೊರತೆ, ದಿಢೀರ್ ಹವಾ ಬದಲಾವಣೆ ಅಥವಾ ಅಧಿಕ ಸಾರ ಉತ್ಪತ್ತಿ ಇದಕ್ಕೆ ಕಾರಣ.

ಅಗತೆಯ ಉದ್ದೇಶ ಮರದ ಸುತ್ತ ಕಳೆ ತೆಗೆಯುವುದು ಮತ್ತು ಮಣ್ಣಿನ ಗಟ್ಟಿ ಪದರವನ್ನು ಸಡಿಲಗೊಳಿಸುವುದು, ಇಷ್ಟೇ. ಆದ್ದರಿಂದ, ಅಗತ್ಯವಿಲ್ಲವೆನ್ನಿಸಿದರೆ ಇದನ್ನು ಕೈಬಿಟ್ಟರೂ ತೊಂದರೆಯಿಲ್ಲ,

ಉಪ ಬೆಳೆಗಳು

ಅಡಿಕೆ ತೋಟದಲ್ಲಿ ಉಪಬೆಳೆ ಸುಲಭ. ಹಿಂದಿನಿಂದಲೂ ಬಳಕೆಯಲ್ಲಿದೆ. ಆದರೆ ಈಗ ಕೆಲವೆಡೆ ಏಲಕ್ಕಿ, ಕರಿಮೆಣಸು ಮುಂತಾದುವು ಅಡಿಕೆಯನ್ನೇ ಉಪಬೆಳೆಯ ಮಟ್ಟಕ್ಕೆ ಇಳಿಸುತ್ತಿವೆ! ಕಾಫಿ, ಕೋಕೊ, ವೀಳೆಯದೆಲೆ, ಅರಿಶಿಣ ಮುಂತಾದುವೂ ಉಪಯುಕ್ತ.

ಅಡಿಕೆಗೆ ಬರುವ ಬೇರು ಹುಳಗಳನ್ನು ತಮ್ಮೆಡೆಗೆ ಆಕರ್ಷಿಸಿ ಅಡಿಕೆಗೆ ಬಾಧೆ ಕಮ್ಮಿ ಮಾಡುವುದರಲ್ಲೂ ಉಪ ಬೆಳೆಗಳು ಬಹಳ ಉಪಯುಕ್ತ.

ಬೇರು ಹುಳ

ಅಡಿಕೆಯ ಬೇರು ತಿನ್ನುವ ಹುಳದ ಕಾಟ ಈಚೆಗೆ ಹೆಚ್ಚಿದೆ. ಬೇಸಾಯದ ಸಮಯದಲ್ಲಿ ಇವನ್ನು ಹಿಡಿದು ನಾಶ ಮಾಡುವುದು ಉತ್ತಮ ವಿಧಾನ. ಬೇವಿನ ಹಿಂಡಿ ಉಪಯೋಗಿಸುವುದೂ ಒಳ್ಳೆಯದು. ತೋಟದ ಬದಿಗೆ ಬೇವು, ಹೊಂಗೆ ಮರಗಳನ್ನು ನೆಟ್ಟರೆ ಅವುಗಳ ಹೂವಿಗೆ ಈ ಹುಳ ಬರುತ್ತವೆ. ಆಗ ಹಿಡಿದು ನಾಶ ಮಾಡಬಹುದು. ಹದ ಮಳೆ ಬಿದ್ದಾಗ ಇವು ಮಣ್ಣಿನಿಂದ ಹೊರಗೆ ಬರುತ್ತವೆ. ಸಂಜೆಯ ಹೊತ್ತು ಅವನ್ನು ನೋಡಬಹುದು. ಆಗಲೂ ಅವನ್ನು ನಾಶಪಡಿಸಲು ಸಾಧ್ಯ.

ಬಾಳೆ

ಬಾಳೆಗೆ 'ಕಟ್ಟೆ' ರೋಗ ಎಲ್ಲಾಕಡೆ ಇದೆ. ಒಂದು ಕೋಗಿನ ಎಲ್ಲಾ ತೋಟಗಳಲ್ಲಿರುವ ಇಂಥ ರೋಗಗ್ರಸ್ತ ಬಾಳೆಗಳನ್ನೂ ಕಿತ್ತು, ರೋಗವಿಲ್ಲದ ತೋಟದಿಂದ ಉತ್ತಮವಾದ ಬಾಳೆ ಸಸಿ ತಂದು ೨೦ ಗ್ರಾಂ ಫ್ಯುರಡಾನ್ ಮಿಶ್ರಣದೊಂದಿಗೆ ನೆಡಬೇಕು. ೪೫ ದಿನ ಕ್ರಮಮ್ಮೆಯಂತೆ ೨ ಸಲ ಇಂಥ ೨೦ ಗ್ರಾಂ ಫ್ಯುರಡಾನ್ ಮಿಶ್ರಣವನ್ನು ಗಿಡದ ಎಲೆಯ ಮೇಲಿಂದ ಹಾಕಬೇಕು. ಈ ರೀತಿ ಹೊಸದಾಗಿ ಬಾಳೆ ಬೆಳೆದರೆ ಕಟ್ಟೆ ತಡೆಗಟ್ಟಬಹುದು.

ಊಟಕ್ಕೆ ಉಪ್ಪು, ತೋಟಕ್ಕೆ ಕಪ್ಪು

ತೋಟಕ್ಕೆ ಕಪ್ಪು ಎಂದರೆ ಊಟಕ್ಕೆ ಉಪ್ಪಿನಷ್ಟೇ ಅಗತ್ಯ ಎಂಬ ಗಾದೆಯಿದೆ. ಒಂದೂವರೆಯಿಂದ ಎರಡೂವರೆ ಅಡಿಯಷ್ಟು ಆಳದ ಕಪ್ಪುಗಳು ಆಯಾ ಜಾಗಕ್ಕೆ ಅನುಗುಣವಾಗಿ ಬೇಕಾಗುತ್ತವೆ.

ಮರಗಳ ಮಧ್ಯೆ ೯ ಅಡಿ ಅಂತರ ಕಾಪಾಡಿಕೊಂಡು ಬಂದರೆ ಉತ್ತಮ ಫಸಲನ್ನು ನಿರೀಕ್ಷಿಸಬಹುದು. ತೀರಾ ೩–೪ ಅಡಿಗಳಷ್ಟು ಹತ್ತಿರವಿರುವ ಕಡೆ ಒಂದೊಂದು ಮರ ಕಡಿದರೂ ಒಳ್ಳೆಯದೇ.

ತೋಟವನ್ನು ಅಚ್ಚುಕಟ್ಟಾಗಿ ಇಡುವುದರಿಂದಲೂ ಹಲವು ರೋಗಗಳ ಹತೋಟಿ ಸಾಧ್ಯ.

ಗೊಬ್ಬರಗಳು

ರಾಸಾಯನಿಕ ಅಥವಾ ಕಾಂಪೋಸ್ಟ್ ಗೊಬ್ಬರ ಹಾಕುವ ಅಗತ್ಯ, ಹಾಕುವ ವಿಧಾನ, ಸುಣ ಅಥವ ರಾಕ್ ಫಾಸ್ಫೇಟ್‌ನ ಉಪಯೋಗ ಹಾಗೂ ಅದನ್ನು ಬಳಸದಿದ್ದರೆ ಆಗಬಹುದಾದ ನಷ್ಟ–ಇವುಗಳನ್ನು ವಿವರಿಸಲಾಯಿತು.

ಮಲೆನಾಡು ಪ್ರಾಂತ್ಯದಲ್ಲಿ ಅಡಿಕೆಗೆ ಎನ್ ಪಿ ಕೆ ೧೦೦ : ೪೦ : ೧೪೦ ಪ್ರಮಾಣದ ಗೊಬ್ಬರ ಬಹಳ ಉತ್ತಮ. ಅಲ್ಲದೆ, ಪ್ರತಿ ಬೇಸಾಯದಲ್ಲೂ ಸ್ವಲ್ಪ ಸುಣ್ಣ, ಪೊಟ್ಯಾಶ್ ಕೊಡುವುದೊಳ್ಳೆಯದು. ಎನ್–೧ ಪಿ–೨ ಕೆ–೩ ಪ್ರಮಾಣದ ರಸಗೊಬ್ಬರವನ್ನು ವರ್ಷಕ್ಕೆ ೨ ಸಲ ಕೊಡುವುದರಿಂದ ೬ ಮರಕ್ಕೆ ಸರಾಸರಿ ೧೦೦ ಕಿಲೊ ಅಡಿಕೆ ಬೆಳೆಯಬಹುದೆಂದು ಕಂಡುಬಂದಿದೆ. ಈ ಬಗ್ಗ ಪ್ರಯೋಗ ಮುಂದುವರಿಯುತ್ತಿದೆ.

ಹಳದಿ ಎಲೆ ರೋಗ

ಅಡಿಕೆಗೆ ಬರುವ ಹಿಡಿಮುಂಡಿಗೆ ರೋಗ ಮತ್ತು ಅಣಬೆ ರೋಗ ಈಗ ಪೂರ್ಣವಾಗಿ ಹತೋಟಿಗೆ ಬಂದಿವೆಯಾದರೂ ಹಳದಿ ಎಲೆ ರೋಗ ಮಾತ್ರ ವಿಜ್ಞಾನಿಗಳಿಗೆ ಇನ್ನೂ ಸವಾಲಾಗಿಯೇ ಇದೆ. ಇದು ಕೇರಳದಲ್ಲಿ ಮುಕ್ಕಾಲು ಭಾಗ ಆಕ್ರಮಿಸಿ ಕರ್ಣಾಟಕದಲ್ಲೂ ಮುಂದುವರಿಯುತ್ತಿದೆ. ಈಚೆಗೆ ಇದರ ಬಗ್ಗೆ ಸಂಶೋಧನೆಗಾಗಿ ಸರ್ಕಾರ ೯.೫ ಲಕ್ಷ ರೂ. ಕೊಟ್ಟಿದ್ದು, ಸಂಶೋಧನೆ ಮುಂದುವರಿಯುತ್ತಿದೆ.

ಸದ್ಯಕ್ಕೆ, ರೋಗ ಬಂದರೆ, ಗೊಬ್ಬರ ಕಡಿಮೆ ಮಾಡಿದರೆ ರೋಗದ ಉಲ್ಬಣ ಸ್ವಲ್ಪ ಕಮ್ಮಿಯಾಗುತ್ತದೆ. ಒಂದು ನಾಲ್ಕು ವರ್ಷ ತಾಳಿಕೆ ಬರುತ್ತದೆ.

ಕಾಡು ಹಂದಿ ಕಾಟ

"ಕಾಡು ಹಂದಿಯ ಕಾಟ ತಡೆಯಲು ಯಾವುದೇ ವೈಜ್ಞಾನಿಕ ವಿಧಾನಗಳಿಲ್ಲ. ಜಮೀನಿನ ಸುತ್ತ ಅಗಳು ತೆಗೆಯುವುದು; ಅದಕ್ಕೂ ಬಗ್ಗದಿದ್ದರೆ ಹೊಡೆದು ಸಾಯಿಸುವುದು – ಮಾತ್ರ ಪರಿಹಾರ" ಎಂಬುದಾಗಿ 'ಮುಂಜಾವು' ವರದಿಯನ್ನಿಟ್ಟುಕೊಂಡು ಡಾ|| ಶ್ಯಾಮ ಭಟ್ ತಿಳಿಸಿದರು.

ಕೋಕೋ

ಅಡಿಕೆಯ ಉಪ ಬೆಳೆಯಾಗಿ ಬೆಳೆಸಿದ್ದ ಕೋಕೋಗೆ ಧಾರಣೆಯಿಲ್ಲವೆಂದು ಅನೇಕ ಕಡೆ ಗಿಡಗಳನ್ನು ಕಡಿಯುತ್ತಿದ್ದಾರೆಂದು ತಿಳಿದು ಬಂದಿದೆ. ಆದರೆ, 'ಕ್ಯಾಂಪ್ಕೊ' ಸಂಸ್ಥೆ ಕಿಲೋಗೆ ೨ ರೂ.ನಂತೆ ಕೋಕೋ ಎ... ಷ್ಟಿದ್ದರೂ ಕೊಳ್ಳುತ್ತಿದ್ದು, ಇದು ಸದ್ಯಕ್ಕೆ ಉತ್ತಮ ಧಾರಣೆಯಾಗಿದೆ. ಇದೊಂದು ಕೈಗಾರಿಕಾ ಬೆಳೆಯಾದ್ದರಿಂದ ಉತ್ತಮ ಭವಿಷ್ಯವಿದೆ. ಆದ್ದರಿಂದ ಯಾರೂ ಕೋಕೋ ಗಿಡಗಳನ್ನು ಕಡಿಯಬಾರದು—ಎಂದು ಕ್ಯಾಂಪ್ಕೋ ನಿರ್ದೇಶಕರಲ್ಲೊಬ್ಬರಾದ ಡಿ. ಟಿ. ನಾಗೇಶ್ ವಿನಂತಿಸಿದರು.

ಕ್ಯಾಂಪ್ಕೊ

ಅಡಿಕೆಗೆ ಇತರೆ ರೋಗಗಳಂತೆ ಮಾ... ಕಟ್ಟೆಯದೂ ಒಂದು ರೋಗವೇ ಆಗಿದೆ. ... ದಕ್ಕಾಗಿ ಕರ್ಣಾಟಕ ಮತ್ತು ಕೇರಳ ರಾಜ್ಯ ಸರ್ಕಾರಗಳ ಆಶ್ರಯದಲ್ಲಿ 'ಕ್ಯಾಂಪ್ಕೋ' (ಕೇಂದ್ರೀಯ ಅಡಿಕೆ ಮಾರಾಟ ಮತ್ತು ಸಂಸ್ಕರಣ ಸಹಕಾರಿ) ಸಂಸ್ಥೆ ಸ್ಥಾಪನೆಗೊಂಡು ಕಾರ್ಯನಿರತವಾಗಿದೆ. ತನ್ನ ಪ್ರಯತ್ನದಿಂದಾಗಿ ಈಗ್ಗೆ ನಾಲ್ಕೈದು ವರ್ಷಗಳಿಂದ ಅಡಿಕೆ ಧಾರಣೆಗೆ ಸಾಕಷ್ಟು ಸ್ಥಿರತೆ ತಂದಿರುವ ಈ ಸಂಸ್ಥೆ ಮಂಡಿಗಳಿಗಿಂತ ಭಿನ್ನವಾಗಿ ಕೆಲಸ ಮಾಡುತ್ತದೆ. ಆದ್ದರಿಂದ ಪ್ರತಿಯೊಬ್ಬ ಬೆಳೆಗಾರನೂ ಇದರ ಸದಸ್ಯನಾಗುವುದಲ್ಲದೆ, ಸ್ವಲ್ಪ ಭಾಗ ಅಡಿಕೆಯನ್ನಾದರೂ ಕಳಿಸಬೇಕು.

ಸಮೀಕ್ಷಕರು:
ಕಲ್ಕುಳಿ ವಿಠಲ ಹೆಗ್ಡೆ
ಮತ್ತು
ಹೆಗ್ಗಾರು ಜಯಂತ್

'ಅಡಿಕೆ ಬಗ್ಗೆ ಅಸಡ್ಡೆ' — ಟೀಕೆ

ಈಗ ಸುಮಾರು ೩೪ ಜಾತಿಯ ಅಡಿ... ತಯಾರಾಗುತ್ತಿದೆ. ರಾಜ್ಯದಲ್ಲಿ ೧.೮ ಲ... ಎಕರೆಯಲ್ಲಿ ಸುಮಾರು ೨೫೦ ಕೋಟಿ ರು... ಗಳ ಬೆಳೆ ತೆಗೆಯಲಾಗುತ್ತಿದೆ. ಪ್ರತ್ಯಕ್ಷವಾ... ೫ ಲಕ್ಷ ರೈತ ಕುಟುಂಬಗಳು, ಪರೋಕ್ಷವಾ... ಲಕ್ಷಾಂತರ ಜನ ಈ ಬೆಳೆಯನ್ನು ಅವ... ಬಿಸಿದ್ದಾರೆ.

ಇಷ್ಟಾದರೂ, ವಿದೇಶಿ ವಿನಿಮಯ ... ಸದ ಸರಕೆಂದು ಇದಕ್ಕೆ, ಬೇರೆಲ್ಲಾ ಧ... ಬೆಳೆಗಳಿಗೂ ಮಾನ್ಯತೆ ಕೊಟ್ಟಿರುವ ೭... ಯೋಜನೆಯಲ್ಲಿ ಏನೂ ಪ್ರಾಶಸ್ತ್ಯ ಕೊಟ್ಟಿ... ಈ ಬಗ್ಗೆ ರೈತರು ಸರ್ಕಾರಕ್ಕೆ ಸೂಕ್ತ ... ಯಲ್ಲಿ ಒತ್ತಾಯ ತರಬೇಕಾಗಿದೆ ಎಂದರು ಪಿ. ಜಿ. ಗುರ್ಜರ್.

ತಾವೇ ಸಂಶೋಧಿಸಿದ ಅಡಿಕೆ ಬೇ... ಸುವ ಮತ್ತು ಒಣಗಿಸುವ ವಿಧಾನ... ಧನಗಳನ್ನು (ಕುಕರ್ ಮತ್ತು ... ಯರ್) ಪರಿಚಯಿಸಿದ ದೇವಂಗಿ ಪ್ರ... ಚಂದ್ರ, ಶ್ರದ್ಧೆ ಇಲ್ಲದವರಿಗೆ ಬೇಸಾ... ಹೇಳಿಸಿದ್ದಲ್ಲ ಎಂದರು.

ಒತ್ತಾಯಗಳು, ನಿರ್ಣಯಗಳು

೧) ಅಡಿಕೆ ಬೆಳೆಯ ರೋಗಗಳ ... ಇನ್ನೂ ಹೆಚ್ಚಿನ ಸಂಶೋಧನೆ ನಡೆ... ಬೇಕು ಮತ್ತು ಹಳದಿ ಎಲೆ ರೋಗಕ್ಕೆ ಪರಿಹಾರವನ್ನು ತುರ್ತಾಗಿ ಕಂಡು ಹಿಡಿ... ಬೇಕು;

(೩ನೇ ಪುಟ...)

ಓದುಗರ ಪತ್ರಗಳು

'ಮಲೆನಾಡನ್ನುಮುಳುಗಿಸುವಯೋಜನೆಗಳನ್ನುವಿರೋಧಿಸೋಣ"

ಮಾನ್ಯರೆ,

ಚಿಕ್ಕಮಗಳೂರು ಜಿಲ್ಲೆಯ ಮಾಗುಂಡಿ ...ಮದಲ್ಲಿ ಭದ್ರಾ ನದಿಗೆ ಅಡ್ಡಲಾಗಿ "ಭದ್ರಾ ಮೇಲ್ದಂಡೆ" ಯೋಜನೆ ನಿರ್ಮಿ...ವುದು ಖಚಿತವೆಂದೂ ಮುಂದಿನ ವರ್ಷ ...ಬಜೆಟ್‌ನಲ್ಲಿ ಇದಕ್ಕಾಗಿ ಹಣ ಮೀಸಲಿ...ವುದಾಗಿಯೂ ಕರ್ನಾಟಕ ರಾಜ್ಯದ ಮು...ಮಂತ್ರಿಗಳೂ ಸೇರಿದಂತೆ ಕೆಲವು ಮಂ...ಗಳು ಚಿತ್ರದುರ್ಗದ ಜನತೆಗೆ ಆಶ್ವಾಸನೆ ...ಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಪ್ರಾಕೃತಿಕವಾಗಿ ...ಸಮೃದ್ಧವಾದದ್ದು. ಇಲ್ಲಿಯ ಬೆಳೆಗಳೂ ...ಷ್ಟೇ ವೈಶಿಷ್ಟ್ಯಪೂರ್ಣವಾದವು. ಪುರಾಣ ...ತಿಹಾಸಗಳಲ್ಲಿ ಅನೇಕ ಋಷಿ ಪುಂಗವರಿಗೆ ತಪೋಭೂಮಿಯಾದ ಈ ಪವಿತ್ರ ಪ್ರದೇಶಗಳು ಭದ್ರೆ ಜೀವನದಿಯಿಂದ ಹುಲುಸಾದ ಅತ್ಯಂತ ದಟ್ಟ ನಿತ್ಯಹರಿದ್ವರ್ಣ ಕಾಡುಗಳಿಂದ ತುಂಬಿವೆ. ಅಪಾರ ವಿದೇಶಿ ವಿನಿಮಯ ತರುವ ಕಾಫಿ, ಏಲಕ್ಕಿ, ಕಾಳು ಮೆಣಸು, ಭತ್ತ, ಬಾಳೆ, ಅಡಿಕೆ ಮುಂತಾದ ವಾಣಿಜ್ಯ ಬೆಳೆಗಳಿಂದ ಜಿಲ್ಲೆಯನ್ನು ಶ್ರೀಮಂತಗೊಳಿಸಿವೆ. ಭದ್ರಾ ಮೇಲ್ದಂಡೆ ಯೋಜನೆಯಿಂದ ಈ ಪ್ರದೇಶಗಳೆಲ್ಲ ಮುಳುಗಡೆ ಆಗುತ್ತವೆ. ಜೊತೆಗೆ ಭದ್ರಾ ಅಭಯಾರಣ್ಯದಲ್ಲಿ ಹಾದುಹೋಗುವ ನಾಲೆ ಅರಣ್ಯದ ಕಣ್ಮಣಿಗಳಾದ ಅಪಾರ ವನ್ಯಮೃಗಗಳ ಶಾಂತ ಜೀವನಕ್ಕೆ ಕುಂದು ತಂದು ಅವು ದಿಕ್ಕಾಪಾಲಾಗುವಂತೆ ಮಾಡುತ್ತದೆ ಹಾಗೂ ಅವು ಜಿಲ್ಲೆಯ ಇತರೆಲ್ಲಾ ಕಡೆ ಪೈರಿಗೆ, ಜನರಿಗೆ ವಿಪರೀತ ಹಾವಳಿ ಮಾಡುವಂತಾಗುತ್ತದೆ.

ಈ ಜಿಲ್ಲೆಯ ಸಲವತ್ತು ಗ್ರಾಮಗಳು ಸಂಕಷ್ಟಕ್ಕೊಳಗಾಗುವ ಈ ಯೋಜನೆಯ ಜೊತೆಗೆ ಶಿವಮೊಗ್ಗ ಜಿಲ್ಲೆಯಲ್ಲಿ (ಆಗುಂಬೆ ಬಳಿ) ನಿರ್ಮಾಣವಾಗಲಿರುವ ಮಾಲತಿ ಅಣೆಕಟ್ಟು ಯೋಜನೆಯಿಂದ ನಮ್ಮ ಜಿಲ್ಲೆಯ ಹದಿನೈದು ಗ್ರಾಮಗಳಿಗೆ ಹಾನಿ ಆಗಲಿದೆ.

ಇಷ್ಟೆಲ್ಲಾ ಆಗುತ್ತಿದ್ದರೂ ನಮ್ಮ ಜಿಲ್ಲೆಯ ಜನಪ್ರತಿನಿಧಿಗಳು ಏನೂ ಆಗಿಲ್ಲವೆಂಬಂತೆ ಮೌನವಾಗಿದ್ದಾರೆ. ಜಿಲ್ಲೆಯ ಜನರಲ್ಲಿ ವ್ಯಾಪಕ ವಿರೋಧವಿದ್ದರೂ ಅದನ್ನು ಸಂಘಟಿತ ರೀತಿಯಲ್ಲಿ ಪ್ರಕಟಿಸಲು ಸಮರ್ಪಕ ನಾಯಕತ್ವ ಇಲ್ಲವಾಗಿದೆ.

ಜಿಲ್ಲೆಯ ಪ್ರಕೃತಿಪ್ರೇಮಿಗಳು, ಈ ಯೋಜನೆಗಳಿಂದಾಗುವ ಅನಾಹುತಗಳ ತಿಳಿವನ್ನು ಜನರಿಗೆ ಮತ್ತು ಸರ್ಕಾರಕ್ಕೆ ತಿಳಿಸುವುದಕ್ಕಾಗಿ ಮತ್ತು ಯೋಜನೆ ವಿರೋಧೀ ಚಳುವಳಿಗೆ ಚಾಲನೆ ನೀಡುವುದಕ್ಕಾಗಿ ನವೆಂಬರ್ ೭ರ ಬುಧವಾರ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳ ಕಚೇರಿಯೆದುರು ಒಂದು ದಿನದ ಸಾಂಕೇತಿಕ ಧರಣಿ ಮುಷ್ಕರ ನಡೆಸಲಿದ್ದಾರೆ.

ಜಿಲ್ಲೆಯ ಎಲ್ಲಾ ಕಡೆಗಳಿಂದ ಪ್ರಕೃತಿ ಪ್ರೇಮಿಗಳು ಮತ್ತು ರೈತರು ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರಿಕೆ.

—ಭದ್ರಾ ಮೇಲ್ದಂಡೆ ಯೋಜನೆ ವಿರೋಧಿಗಳ ಒಕ್ಕೂಟ,
ಬಾಳೆಹೊನ್ನೂರು.

ಕೆಸವೆ ರಸ್ತೆಗೆ ಟಾರು ಆಗುವುದು ಯಾವ ಕಾಲಕ್ಕೆ?

ಮಾನ್ಯರೆ,

ನಮ್ಮ ಕೆಸವೆ ರಸ್ತೆಗೆ ಸ್ವಲ್ಪ ಸ್ವಲ್ಪವಾಗಿ ಟಾರು ಹಾಕಿಸುವುದಾಗಿ ಮಂತ್ರಿಗಳು ಭರವಸೆ ಕೊಟ್ಟಿದ್ದರೆಂದು ಜನತಾ ಪಕ್ಷದ ಕಾರ್ಯಕರ್ತರು ಉತ್ತರಿಸಿದ್ದಾರೆ ('ಮುಂಜಾವು'– ೧೪-೧೦-೮೪.) ಇಲ್ಲಿ "ಸ್ವಲ್ಪಸ್ವಲ್ಪವಾಗಿ" ಎಂಬುದು ಸ್ವಲ್ಪ ವಿಪರೀತಾರ್ಥಕ್ಕೆ ಎಡೆ ಕೊಡುವಂಥದು. ಏಕೆಂದರೆ, ನಮಗೆ ತಿಳಿದಿರುವಂತೆ ೧ ಕಿ. ಮಿ. ರಸ್ತೆ ಮಾಡಿಸಲು ೮೦ ಸಾವಿರ ರೂ. ಬೇಕಾಗುತ್ತೆ. ಆದರೆ ಈ ವರ್ಷದ ಕೊರ್‍ಪಲೋ!! ಇಲಾಖೆ ಕಾರ್ಯಕ್ರಮದಂತೆ ನಮ್ಮ ರಸ್ತೆಗೆ ಟಾರು ಹಾಕಿಸಲು ಮಂಜೂರಾಗಿರುವುದು ಕೇವಲ ೩ ಸಾವಿರ ರೂಪಾಯಿ. ಇದರಲ್ಲಿ ಎಷ್ಟು ದೂರ ಟಾರು ಆಗಬಹುದು? ಇದೇ ರೀತಿ ಪ್ರತಿ ವರ್ಷ ಹಣ ಒದಗಿಸುವುದಾದಲ್ಲಿ ನಮ್ಮ ರಸ್ತೆಗೆ ಪೂರ್ತಿ ಟಾರು ಆಗುವುದು ಯಾವ ಕಾಲಕ್ಕೆ?

—ಗ್ರಾಮಸ್ಥರು, ಕೆಸವೆ.

ಬರ್ಕನಘಟ್ಟ: ಕುಚೋದ್ಯದ ವರದಿ?

ಮಾನ್ಯರೆ,

ಬಸರೀಕಟ್ಟೆ ಬಳಿಯ ಬರ್ಕನಘಟ್ಟದ ರೈತರು ಸಿ.ಪಿ.ಐ. ನೇತೃತ್ವದ "ಕಿಸಾನ್ ಸಭೆ"ಗೆ ಸೇರ್ಪಡೆಯಾಗಿರುವುದಾಗಿಯೂ, ಈ ಊರಿಗೆ ಕುಡಿಯುವ ನೀರು, ಭಾಗ್ಯ ಜ್ಯೋತಿ, ರಸ್ತೆದುರಸ್ತಿ, ಪಕ್ಕಾಪೋಡು ಮುಂತಾದ ಬೇಡಿಕೆಗಳ ಬಗ್ಗೆ ಸರ್ಕಾರಕ್ಕೆ ಒತ್ತಾಯ ಸಲ್ಲಿಸಲಾಯಿತೆಂದೂ ಪತ್ರಿಕೆಗಳಲ್ಲಿ ವರದಿಯಾಗಿದೆ.

ಆದರೆ ಬರ್ಕನಘಟ್ಟ ವಾಸಿಗಳಾದ ನಾವುಗಳು ಜನತಾ ಸರ್ಕಾರಕ್ಕೆ ಮತ್ತು 'ಕರ್ನಾಟಕ ರಾಜ್ಯ ರೈತ ಸಂಘ'ಕ್ಕೆ ನಿಷ್ಠೆಯುಳ್ಳವರೇ ಹೊರತು, ಸಿ.ಪಿ.ಐ.ನ ರೈತ ಸಂಘಕ್ಕಲ್ಲ ಎಂದು ವಿನಮ್ರವಾಗಿ ತಿಳಿಸುತ್ತಿದ್ದೇವೆ.

ಅಲ್ಲದೆ ಬರ್ಕನಘಟ್ಟವನ್ನೊಳಗೊಂಡಿರುವ ಬೆತ್ತದಕೊಳಲು ಗ್ರಾಮವನ್ನು ಸರ್ಕಾರ ೧೯೮೪-೮೫ನೇ ಸಾಲಿಗೆ ದತ್ತು ತೆಗೆದುಕೊಂಡಿದ್ದು, ಎಲ್ಲಾ ಇಲಾಖೆಗಳಿಂದಲೂ ಬರ್ಕನಘಟ್ಟಕ್ಕೆ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಗುರ್ತಿಸಿ, ಈಗಾಗಲೇ ಕೆಲವನ್ನು ಕಾರ್ಯರೂಪಕ್ಕೆ ತರಲಾಗಿದೆ; ಉಳಿದವಕ್ಕೆ ಯೋಜನೆಗಳನ್ನು ತಯಾರಿಸಿದ್ದು ವಿವಿಧ ಹಂತಗಳಲ್ಲಿವೆ. ದತ್ತು ಗ್ರಾಮದ ಅಭಿವೃದ್ಧಿ ಸಮಿತಿಯವರು, ಶಾಸಕ ಗೋವಿಂದ ಗೌಡರು ಹಾಗೂ ಎಲ್ಲಾ ಇಲಾಖೆಗಳ ಅಧಿಕಾರಿಗಳು ಈ ಊರಿನ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಶ್ರಮಿಸುತ್ತಿದ್ದಾರೆ.

ಸದ್ರಿ ರೈತ ಸಂಘದ ಸಂಚಾಲಕರಲ್ಲೊಬ್ಬರೆಂದು ಉಲ್ಲೇಖಿಸಲ್ಪಟ್ಟ ಬೆಳ್ಳಯ್ಯ ಮಾಜಿ ತಾ.ಅ.ಮಂ. ಸದಸ್ಯರಾಗಿದ್ದು, ಅವರಿಗೂ ಮೇಲ್ಕಂಡ ಎಲ್ಲಾ ವಿಷಯಗಳೂ ತಿಳಿದಿರಲೇಬೇಕು. ಆದ್ದರಿಂದ ಈ ಮೇಲ್ಕಂಡ 'ರೈತ ಸಂಘ' ಸ್ಥಾಪನೆಯ ಸುದ್ದಿ ಯಾರೋ ಕುಚೋದ್ಯಕ್ಕಾಗಿ ಹುಟ್ಟಿಸಿದ್ದೆಂದು ಕಾಣುತ್ತದೆ.

—(ನಾಲ್ಕು ಸಹಿಗಳಿವೆ.)

ಅಸಂಘಟಿತರ ನಾಯಕ ನಾರಾಯಣಸ್ವಾಮಿ

ಶೃಂಗೇರಿಯಲ್ಲಿ ೫. ೮ರಂದು ಹೃದಯಾಘಾತದಿಂದ ನಿಧನರಾದ ಜನಪ್ರಿಯ ಕಾರು ಚಾಲಕ ನಾರಾಯಣ ಸ್ವಾಮಿ (೩೮) ಅಪಾರ ಸ್ನೇಹಿತರು-ಶಿಷ್ಯರ ಬಳಗವನ್ನು, ಪತ್ನಿ, ನಾಲ್ಕು ಪುಟ್ಟ ಮಕ್ಕಳನ್ನು ಅನಾಥರಾಗಿಸಿದರು.

ದಿವಂಗತರು ಶೃಂಗೇರಿಗೆ ಬಂದು ೨೦ ವರ್ಷ ಅವಿರತವಾಗಿ ಕೆಲಸ ಮಾಡಿದ್ದರು. ಶೃಂಗೇರಿಯ ಬಹು ಭಾಗ ಚಾಲಕರೆಲ್ಲರೂ ಇವರ ಶಿಷ್ಯರೇ. ಒಳ್ಳೆ ಹಾಸ್ಯ ಪ್ರವೃತ್ತಿಯ ಈತ ಊರಿನ ಎಲ್ಲರ ಪ್ರೀತಿ ಪಾತ್ರರಾಗಿ, ಆಪದ್ಬಾಂಧವರಾಗಿದ್ದರು. ಜಾತಿಯ ಭೇದ ಭಾವವಿಲ್ಲದೆ ಎಲ್ಲರ ಬಂಧುವಾಗಿದ್ದರು. ಬೇರೆಲ್ಲ ಚಾಲಕರೂ ಕಾರಿನಲ್ಲಿ ಶವ ಸಾಗಿಸಲು ಒಪ್ಪದಿದ್ದರೂ ಇವರೊಬ್ಬರು ಮಾತ್ರ ಆ ಬಗ್ಗೆ ಯಾವುದೇ ಅಳುಕಿಲ್ಲದ ಸಾಹಸಿಯಾಗಿದ್ದರು.

ಉತ್ತಮ ತಾಂತ್ರಿಕ ಜ್ಞಾನ ಹೊಂದಿದ್ದ ನಾರಾಯಣ ಸ್ವಾಮಿ, ಶೃಂಗೇರಿಯ ವಾಹನಗಳಿಗೆ ಪುಕ್ಕಟೆಯಾಗಿ ರಿಪೇರಿ ಮಾಡುವ ಸಹಕಾರಿಯಾಗಿದ್ದರು. ಆದರೆ ತನಗಾಗಿ ಏನನ್ನೂ ಉಳಿಸಿಕೊಳ್ಳದ ಈ ವ್ಯಕ್ತಿ ತನ್ನ ಕುಟುಂಬವನ್ನು ತಬ್ಬಲಿಯಾಗಿಸಿದ್ದಾರೆ. ಇವರ ಪುಟ್ಟ ಮಕ್ಕಳ ಭವಿಷ್ಯಕ್ಕಾಗಿ ಇವರ ಸ್ನೇಹಿತರು, ಶಿಷ್ಯರು ನಿಧಿ ಸಂಗ್ರಹದಲ್ಲಿ ತೊಡಗಿದ್ದಾರೆ.

ಇವರ ಗೌರವಾರ್ಥ ಶೃಂಗೇರಿಯಲ್ಲಿ ಒಂದು ದಿನ ಎಲ್ಲಾ ರಿಕ್ಷಾ, ಕಾರುಗಳು ಚಲಿಸದೆ 'ಮೌನ' ಆಚರಿಸಿದವು. ಇವರ ಸಾವಿನ ಸುದ್ದಿ ಕೇಳಿ ಆಗಮಿಸಿದ ಜನಪ್ರವಾಹವೇ ಇವರ ಜನಪ್ರಿಯತೆಗೆ ಸಾಕ್ಷಿಯಾಗಿತ್ತು.

ಎಲ್ಲರನ್ನೂ ನಗಿಸುವ ದೊಡ್ಡ ಗುಣ ಹೊಂದಿದ್ದ ನಾರಾಯಣ ಸ್ವಾಮಿ ಅಸಂಘಟಿತ ಕಾರ್ಮಿಕರ ನಾಯಕರಾಗಿದ್ದರು. ಆದರೂ ಅಸಂಘಟಿತ ಕಾರ್ಮಿಕರಾಗಿಯೇ ಕೊನೆಯುಸಿರೆಳೆದರು. ಇವರ ಶಿಷ್ಯರುಗಳಾದರೂ ಸಂಘಟಿತರಾಗಿ ತಮ್ಮ ಹಕ್ಕುಗಳನ್ನು ... ಧಿಸಿಕೊಳ್ಳಲಿ, ತಮ್ಮ ಭವಿಷ್ಯ... ದಿಕ್ಕು ಕಂಡುಕೊಳ್ಳಲಿ.

—ಕಲ್ಕುಳಿ ವಿಠಲ ...

ಅಡಿಕೆ ಬೆಳೆ ವಿಚಾರ ಸಂಕಿರಣ

(೨ನೇ ಪುಟದಿಂದ)

೨) ಬೇರೆ ವಾಣಿಜ್ಯ ಬೆಳೆಗಳಿಗೆ ಅವಕಾಶ ಇರುವಲ್ಲಿ ಹಾಗೂ ನಾಲಾ ಪ್ರದೇಶಗಳಲ್ಲಿ ಅಡಿಕೆ ಬೆಳೆಯದಂತೆ ನಿಷೇಧಿಸಿ, ಪರಂಪರಾಗತವಾಗಿ ಬೆಳೆಯುವ ಮಲೆನಾಡಲ್ಲಿ ಇದರ ಉಳಿವಿಗೆ ಸೂಕ್ತ ಪ್ರೋತ್ಸಾಹ ಕೊಡಬೇಕು;

೩) ತೋಟಗಳ ಸುಧಾರಣೆ ಮತ್ತು ಹೆಚ್ಚಿನ ಉತ್ಪನ್ನಕ್ಕಾಗಿ ಸುಲಭ ರೀತಿಯ ಅಭಿವೃದ್ಧಿ ಸಾಲಗಳನ್ನು ಕೊಡಬೇಕು;

೪) ತೀರ್ಥಹಳ್ಳಿಯ ಕೃಷಿ ಸಂಶೋಧನಾ ಕೇಂದ್ರವನ್ನು ಅಭಿವೃದ್ಧಿಪಡಿಸಿ, ಅಡಿಕೆ ಬೆಳೆ ಸಂಶೋಧನೆಗೆ ಪ್ರಾಧಾನ್ಯ ಕೊಡಬೇಕು;

೫) ಮಲೆನಾಡಿಗೆ ಹೊಂದುವ ಹೊಸ ಅಡಿಕೆ ತಳಿಗಳನ್ನು ಅಭಿವೃದ್ಧಿಪಡಿಸಬೇಕು;

೬) ಅಡಿಕೆ ತೋಟಗಳಲ್ಲಿ ಉಪ ಬೆಳೆಗಳನ್ನು ಹೆಚ್ಚಿಸಬೇಕು ಹಾಗೂ ಅವುಗಳಿಗೆ ಸೂಕ್ತ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಬೇಕು; ಅಡಿಕೆಯ ಉತ್ಪನ್ನಗಳಿಂದ ತಯಾರಾದ ಅಡಿಕೆ ಪುಡಿ, ಹಾಳೆ ದೊನ್ನೆ ಮುಂತಾದವನ್ನು ಜನಪ್ರಿಯಗೊಳಿಸಬೇಕು

— ಮುಂತಾದ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಇದಲ್ಲದೆ, ಈ ಕೆಳಗಿನ ಕೆಲವಂಶಗಳ ಬಗ್ಗೆ ಸಂಕಿರಣದಲ್ಲಿ ಶಿಫಾರ್ಸು ಮತ್ತು ಒತ್ತಾಯ ಮಾಡಲಾಯಿತು:

ತೋಟದ ಕಪ್ಪು ಮುಂತಾದ ಹಲವು ಮಣ್ಣಿನ ಕೆಲಸಗಳನ್ನು 'ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ'ಗೆ ಸೇರಿಸಬೇಕು; ರೈತರು ಸಂಶೋಧಿಸಿರುವ ಉತ್ತಮ ಬೇಸಾಯ ಪದ್ಧತಿ ಮುಂತಾದುವನ್ನು ಪ್ರಚಾರಗೊಳಿಸಬೇಕು ಹಾಗೂ ಕುಕರ್, ಡ್ರೈಯರ್ ಮುಂತಾದುವನ್ನು ಸಾಮಾನ್ಯರಿಗೂ ಎಟುಕುವಂತೆ ಅಭಿವೃದ್ಧಿಪಡಿಸಬೇಕು; ಸಿಂಪರಣೆ ಮತ್ತು ಸುಲಿಯುವ ಯಂತ್ರಗಳನ್ನು ಸಂಶೋಧಿಸಬೇಕು; ಅಡಿಕೆಯನ್ನು ಒಂದು ಕೈಗಾರಿಕಾ ಸಾಮಗ್ರಿಯಾಗಿ ಉಳ್ಳ ಕೆಲವು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಬೇಕು; ತೋಟಗಾರಿಕೆ ಇಲಾಖೆಯವರು ತಯಾರು ಮಾಡುವ ಅಡಿಕೆ ಸಸಿಗಳನ್ನು ಆಯಾ ಪ್ರಾಂತ್ಯದವರಿಗೂ ಕೊಡಬೇಕು; ವರ್ಷಕ್ಕೊಮ್ಮೆಯಾದರೂ ಇಂಥ ವಿಚಾರ ಸಂಕಿರಣಗಳನ್ನು ಅಲ್ಲಲ್ಲಿ ನಡೆಸಬೇಕು; ೭ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಅಡಿಕೆ ಬೆಳೆಗೂ ಮಾನ್ಯತೆ ನೀಡಿ ಅಭಿವೃದ್ಧಿ ಸೌಲಭ್ಯಗಳನ್ನು ಕಲ್ಪಿಸಬೇಕು; ಇತ್ಯಾದಿ.

(ಪ್ರಿಯ ಓದುಗರೆ, ಇಲ್ಲಿ ಸಾಧ್ಯವಾದಷ್ಟು ವಿವರಗಳನ್ನು ಒದಗಿಸಲು ಯತ್ನಿಸಿದ್ದೇವಾದರೂ ಇದು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದಕ್ಕೆ ಸಮನಲ್ಲ. ಇಂಥ ಅಪರೂಪದ, ಬೋಧಪ್ರದವಾದ ಒಂದು ಸಂದರ್ಭವನ್ನು ಕಳೆದುಕೊಂಡವರಿಗೆ ಅದು ಮತ್ತೆಂದೂ ಭರಿಸಲಾಗದಂಥ ನಷ್ಟವೇ ಎಂಬುದನ್ನು ನೆನಪಿಡಿ. ಇನ್ನಾದರೂ ಒಂದಿಷ್ಟು ಆಸಡ್ಡೆ, ಜಡತೆ ಬಿಟ್ಟು ಇಂಥದರಲ್ಲೆಲ್ಲ ಭಾಗವಹಿಸುತ್ತ, ಇದ್ದಷ್ಟಕ್ಕೇ ಮೊದಲು ಅಚ್ಚುಕಟ್ಟು ಮಾಡಿಕೊಂಡು ಸ್ವಲ್ಪ ತಲೆ ಎತ್ತುವುದು ಹೇಗೆ ಎಂಬುದನ್ನು ಕಲಿಯುವ ಬಗ್ಗೆ ಸ್ವಲ್ಪ ಮನಸ್ಸು ಕೊಡಿ ಎಂದು ಕಳಕಳಿಯಿಂದ ಸೂಚಿಸಬಯಸುತ್ತೇನೆ.

—ಸಂಪಾದಕ.)

ಸಿಬ್ಬಂದಿಯ ಕೊರತೆ ಕಾರಣ
ವೃದ್ಧಾಪ್ಯ ವೇತನ ವಿಳಂಬ

ಕೊಪ್ಪ: ಇಲ್ಲಿನ ಅಂಚೆ ಕಛೇರಿಯಲ್ಲಿ ಪ್ರತಿ ದಿನ ಸಾಲುಗಟ್ಟಿ ಕೂತು ತಮ್ಮ ಪಾಲಿನ 'ವೃದ್ಧಾಪ್ಯ ವೇತನ'ಕ್ಕಾಗಿ ಕಾಯುವ ಹಣ್ಣು ಜೀವಗಳು–ತಮಗೆ ಪ್ರತಿ ತಿಂಗಳೂ ಹಣ ವಿಪರೀತ ತಡವಾಗುತ್ತಿದೆಯೆಂದು ಅಳಲುತ್ತಾರೆ. 'ಕಾದು ಕಾದು ಬರಿಗೈಯಲ್ಲಿ ಮರಳುತ್ತೇವೆ, ಕೊಡುವ ಇಷ್ಟು ಸಣ್ಣ ಮೊತ್ತವನ್ನಾದರೂ ಸಕಾಲದಲ್ಲಿ ಕೊಟ್ಟರೆ ಎಷ್ಟೋ ಅನುಕೂಲವಾಗುತ್ತಿತ್ತು' ಎನ್ನುತ್ತಾರೆ. ಹಳ್ಳಿಗಳಿಂದಲೂ ಹೀಗೇ ದೂರು ಬರುತ್ತಿರುತ್ತವೆ.

ಮೊದಮೊದಲು ಅವರಿಗೆ (ಕೆಲವರಿಗೆ ಈಗಲೂ) ಅಂಚೆ ಕಛೇರಿಯವರ ಮೇಲೇ ಅನುಮಾನ–ದುಡ್ಡು ಬಂದಿದ್ದರೂ ಸತಾಯಿಸುತ್ತಾರೆ ಎಂದು. ಅಂಚೆಯವರು ಹೇಳುತ್ತಾರೆ–ಮನಿ ಆರ್ಡರ್ ಬಂದ ದಿನವೇ ಬಟವಾಡೆ ಮಾಡುತ್ತೇವೆ. ಅದು ಬರುವುದೇ ತಡವಾಗುತ್ತದೆ. ಕೆಲವೊಮ್ಮೆ ರಜೆಗಳು ಬಂದರೆ ತಾರೀಖು ೨೦–೨೫ ದಾಟಿ ಮುಂದಿನ ತಿಂಗಳಿಗೆ ಹೋಗುವುದೂ ಇದೆ, ಎಂದು.

ಮನಿ ಆರ್ಡರ್ ಕಳಿಸುವ ಟ್ರೆಜರಿಯಲ್ಲಿ ಸಿಬ್ಬಂದಿಯ ತೀವ್ರ ಕೊರತೆಯಂತೆ. ಅಲ್ಲಿಗೆ ಬರಬೇಕಾಗಿದ್ದ ಗುಮಾಸ್ತರು ಬರಲಿಲ್ಲ, ಇದ್ದವರಿಗೆ ಬೇರೆ ಕಡೆಗಳಿಗೆ ಆಯಿತಂತೆ. "ಈಗ ಬೇರೆಲ್ಲಾ ಕೆಲಸಗಳ ಜೊತೆಗೆ ನಾವೇ (ಇಬ್ಬರೇ) ಕೂತು ಮನಿ ಆರ್ಡರ್ ಫಾರಂಗಳನ್ನು ಬರೆಯುತ್ತಾ ಅದನ್ನು ತಡವಾಗದಂತೆ ಯತ್ನಿಸುತ್ತಿದ್ದೇವೆ" ಎನ್ನುತ್ತಾರೆ ಖಜಾನಾಧಿಕಾರಿ.

ಇಂಥ ತುರ್ತಿನ ಜಾಗಕ್ಕಾದರೂ ಅಗತ್ಯ ಸಿಬ್ಬಂದಿ ಒದಗಿಸಬೇಕಾದ್ದು ಮೇಲಧಿಕಾರಿಗಳ ಸಾಮಾಜಿಕ ಹೊಣೆ ಅಲ್ಲವೆ?

ಕೊಪ್ಪ ಲಯನ್ಸ್ ಕ್ಲಬ್ ಆಶ್ರಯದಲ್ಲಿ ಜನವರಿ ೩ರಂದು
ರಕ್ತ ದಾನ ಶಿಬಿರ

೧೯೮೫ರ ಜನವರಿ ೩ ರಂದು ಪುರಭವನದಲ್ಲಿ ರಕ್ತದಾನ ಶಿಬಿರವನ್ನು ಲಯನ್ಸ್ ಕ್ಲಬ್ ಏರ್ಪಡಿಸಿದೆ. ಅದರಲ್ಲಿ ರಕ್ತದಾನ ಮಾಡುವವರಿಗೆ ಲಯನ್ಸ್ ಸಂಸ್ಥೆ ಪ್ರಶಸ್ತಿ ಪತ್ರಿಕೆ ನೀಡವುದಲ್ಲದೆ, ಅವರಿಗೆ ಅಥವಾ ಅವರ ಕುಟುಂಬದಲ್ಲಿ ಯಾರಿಗಾದರೂ ಆಕಸ್ಮಾತ್ ರಕ್ತಕೊಡಬೇಕಾದಂಥ ಅಪಾಯ ಸಂಭವಿಸಿದಲ್ಲಿ ಸಂಸ್ಥೆಯ ಸದಸ್ಯರು ರಕ್ತಕ್ಕೆ ರಕ್ತ ಕೊಡುವ ಸಂಕಲ್ಪ ಮಾಡಿದ್ದಾರೆ. (ರಕ್ತದಾನಿಗಳ ರಕ್ತದ ಗುಂಪನ್ನೂ ತಿಳಿಸಲಾಗುವುದು.)

ಆತ್ಮಹತ್ಯೆ

ಮೇಗೂರು: ಶಿವಮೊಗ್ಗದಿಂದ ಇಲ್ಲಿಗೆ ಬರುವ ವಿನಾಯಕ ಬಸ್ಸಿನ ಜನಪ್ರಿಯ ಡ್ರೈವರ್ ಆಗಿದ್ದ ಇಂತ್ರು ಡಯಾಸ್ ಅವರು ಇಲ್ಲಿಗೆ ಸಮೀಪದ ತಲವಾನೆಯ ತಮ್ಮ ಮನೆಯಲ್ಲಿ ಅ. ೨೧ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ. ಜೀವನದಲ್ಲಿ ಜಿಗುಪ್ಸೆಯೇ ಆತ್ಮಹತ್ಯೆಗೆ ಕಾರಣವೆಂದು ಹೇಳಲಾಗಿದೆ.

ಎರಡು ಸೇತುವೆ ಶಿಲಾನ್ಯಾಸ

ಕೊಪ್ಪ: ಈ ತಾಲ್ಲೂಕಿನ ಕೊಗ್ರೆ ಸಮೀಪ ಅತ್ತಿಕೊಡಿಗೆ–ಶಾಂತಿಗ್ರಾಮ–ಚಿತ್ತದಕೊಳಲು ರಸ್ತೆಯಲ್ಲಿ ಕೊಗ್ರೆಹಳ್ಳಕ್ಕೆ ಹಾಗೂ ಶೃಂಗೇರಿ ತಾ॥ ಹುಲುಗಾರು–ತೋರಣಗದ್ದೆ–ಕೆರೆ ರಸ್ತೆಯಲ್ಲಿ ನಂದಿನಿ ಹೊಳೆಗೆ ಕಟ್ಟಲಿರುವ ಸೇತುವೆಗಳ ಶಿಲಾನ್ಯಾಸವನ್ನು ಕಾಮಗಾರಿ ಮಂತ್ರಿ ಎಂ. ಚಂದ್ರಶೇಖರ್ ಈಚೆಗೆ ನೆರವೇರಿಸಿದರು.

ಸಿಂದೋಡಿ–ಸಿರಿಮನೆ–ಚಟ್ನಮನೆ ರಸ್ತೆಯ ರಿಪೇರಿ ಕಾರ್ಯ ಗ್ರಾಂಟ್ ಮುಗಿದಿದ್ದರಿಂದ ನಿಂತು ಹೋಗಿ, ಮಧ್ಯದಲ್ಲಿ ೨ ಫರ್ಲಾಂಗ್ ದೂರ ರಸ್ತೆ ಬಂದ್ ಆಗಿದ್ದನ್ನು ಸರಿ ಮಾಡಿ ಸಂಪರ್ಕ ಕಲ್ಪಿಸಲು ಸಚಿವರ ಸೂಚನೆಯ ಮೇರೆಗೆ ಜಿಲ್ಲಾಧಿಕಾರಿಗಳು ರಾ.ಗ್ರಾ.ಉ.ಯೋಜನೆಯಲ್ಲಿ ಹಣ ಮಂಜೂರು ಮಾಡುವುದಾಗಿ ಭರವಸೆ ಕೊಟ್ಟಿದ್ದಾರೆ.

ರಕ್ತದಾನ ಎಲ್ಲಕ್ಕಿಂತ ಶ್ರೇಷ್ಠ ದಾನ
ರಕ್ತ ದಾನ ಮಾಡಿ,
ಮಹಾದಾನಿಗಳೆನಿಸಿಕೊಳ್ಳಿ

ಮಾಜಿ ಗೇಣಿದಾರರ ಕಂತು ಮನ್ನಾ

ಬೆಂಗಳೂರು: ಭೂ ಸುಧಾರಣೆ ಶಾಸನದನ್ವಯ ಭೂಮಿ ಪಡೆದ ಮಾಜಿ ಗೇಣಿದಾರರು ೨೦ ವರ್ಷಗಳವರೆಗೆ ಕಟ್ಟುತ್ತಾ ಇ... ಬೇಕಾಗಿದ್ದ ಕಂತಿನ ಹಣವನ್ನು ರಾಜ್ಯ ... ರ್ಕಾರ ಈ ನವೆಂಬರ್ ತಿಂಗಳಿಂದ ರದ್ದು ಮಾಡಿದೆ. ಭೂಮಿಯ ಮಾಲೀಕತ್ವವನ್ನು ತಕ್ಷಣವೇ ಅವರವರಿಗೆ ವರ್ಗಾಯಿಸಲಾಗುವುದು.

ಇದರಿಂದ ಸುಮಾರು ೮ ಲಕ್ಷ ಜನರ ಋಣಭಾರ ಶಾಶ್ವತವಾಗಿ ಪರಿಹಾರವಾದ್ದು, ರಾಜ್ಯ ಸರ್ಕಾರಕ್ಕೆ ಈ ಅವಧಿ ಮುಗಿಯುವವರೆಗೆ ಒಟ್ಟು ಬರಬೇಕಾಗಿದ್ದ ಸುಮಾರು ೯೯ ಕೋಟಿ ರೂ. ಖೋತಾ ಆಗುತ್ತದೆ. ಆದರೆ 'ಕೈಯಿಂದ' ಏನೂ ಹೋಗುವುದಿಲ್ಲ.

ಈ ಆಜ್ಞೆ ಜಾರಿಯ ಉಸ್ತುವಾರಿಯನ್ನು ಹಣಕಾಸು, ಕಂದಾಯ ಮತ್ತು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೆ ವಹಿಸಲಾಗಿದೆ.

ಕ್ಷೇತ್ರಕ್ಕೆ ಎಸ್. ಮಲ್ಲಿಕಾರ್ಜುನಯ್ಯ ಭೇಟಿ

ಕೊಪ್ಪ: ಭಾಜಪಾದ ವಿಧಾನ ಪರಿಷತ್ ಸದಸ್ಯ ಎಸ್.ಮಲ್ಲಿಕಾರ್ಜುನಯ್ಯ ಅ. ೨೦ ಮತ್ತು ೨೧ರಂದು ಜಿಲ್ಲೆಯ ವಿವಿಧೆಡೆ ಮತದಾರರನ್ನು ಭೇಟಿ ಮಾಡಿದರು. ಅ. ೨೧ ರಂದು ಅವರು ಇಲ್ಲಿನ ಭಾಜಪಾ ಕಾರ್ಯಾಲಯವನ್ನು ಉದ್ಘಾಟಿಸಿದರು.

ಇಲ್ಲಿನ ಸಹಾಯಕ ಶಿಕ್ಷಣಾಧಿಕಾರಿಗಳು ತಾಲ್ಲೂಕಿನ ಶಿಕ್ಷಕರಿಗೆ ಸಂಬಳ ಡ್ರಾ ಮಾಡುವ ಅಧಿಕಾರ ೬ ತಿಂಗಳಿಗೊಮ್ಮೆ ನವೀಕರಿಸಲ್ಪಡಬೇಕಾಗಿದ್ದು, ಕಳೆದ ಜುಲೈನ... ಈ ಸಂಬಂಧ ಆಜ್ಞೆ ಸಕಾಲದಲ್ಲಿ ಬಾರದ... ತಾ॥ನ ಶಿಕ್ಷಕರಿಗೆ ೩ ತಿಂಗಳು ಸಂಬಳ ಬಟವಾಡೆ ತಡವಾಗಿ ಚಳುವಳಿಗೆ ದಾರಿ ಮಾಡಿತ್ತು. ಅನಂತರ ಭಾಜಪಾದ ವಿಧಾನ ಪರಿಷತ್ ಸದಸ್ಯ ಎಸ್. ಮಲ್ಲಿಕಾರ್ಜುನಯ್ಯ ಮತ್ತಿತರರ ಪ್ರಯತ್ನಗಳಿಂದ ಅಗತ್ಯ ಆಜ್ಞೆ ದೊರೆತಿತ್ತು. ಬರುವ ಜನವರಿಯಲ್ಲಿ ಪುನಃ ಇದೇ ಸಮಸ್ಯೆ ಪುನರಾವರ್ತನೆಯಾಗುವ ಅವಕಾಶವಿದ್ದು, ಹಾಗೆ ಆಗದಂತೆ ನೋಡಿಕೊಳ್ಳಬೇಕೆಂದು ತಮ್ಮ ಪಕ್ಷದ ಶಾಸಕರುಗಳಲ್ಲಿ ಮನವಿ ಮಾಡಿರುವುದಾಗಿ ಕೊಪ್ಪ ತಾ॥ ಭಾಜಪಾ ಅಧ್ಯಕ್ಷ ಬಿ. ಎಂ. ರಘುನಾಥ್ ತಿಳಿಸಿದ್ದಾರೆ.

ಕಾರ್ಯಾಲಯ

ಈವರೆಗೆ ಪಕ್ಷದ ಕಾರ್ಯಾಲಯ ತೆರೆಯಲು ಸೂಕ್ತ ಸ್ಥಳಾವಕಾಶ ಸಿಗದಿದ್ದರಿಂದ ತಾ... ಗಳು ಜನತೆಯ ಸಮಸ್ಯೆಗಳನ್ನು ತಿಳಿದು ... ಕಡೆ ಹೆಚ್ಚಿನ ಗಮನ ಕೊಡಲು ಅಡಚಣೆಯಾಗಿತ್ತು. ಈಚೆಗೆ, ಬಲವಂತರಾವ್ ... ವರ ಕಾಫಿ ಬಾರ್ ಮಹಡಿಯ ಮೇಲೆ ... ದ ಕಚೇರಿ ತೆರೆಯಲಾಗಿದ್ದು, ಸಾರ್ವಜನಿಕರು ತಮ್ಮ ಕುಂದು ಕೊರತೆಗಳ ಬಗ್ಗೆ ಕಚೇರಿಯಲ್ಲಿ ಕಾರ್ಯಕರ್ತರನ್ನು ಸಂಪರ್ಕಿಸಬಹುದೆಂದೂ ರಘುನಾಥ್ ತಿಳಿಸಿದ್ದಾರೆ.

ಕೊಪ್ಪದ ಪ್ರಾಥಮಿಕ ಸಹಕಾರಿ ಭೂ ಅಭಿವೃದ್ಧಿ ಬ್ಯಾಂಕ್:
ಸಹ॥ ಸಂಸ್ಥೆಗಳ ಮಧ್ಯೆ ಒಂದು ಆಶಾಕಿರಣ

(ವಿಶೇಷ ಪ್ರತಿನಿಧಿಯಿಂದ)

ಕೊಪ್ಪ: ಬೇಸಾಯಕ್ಕೆ ಸಂಬಂಧಿಸಿದ ಎಲ್ಲಾ ವಿಭಾಗಗಳಲ್ಲಿ ರೈತರಿಗಾಗಿ ಹಲವು ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕು ಸಹಕಾರಿ ಸಂಸ್ಥೆಗಳ ಮಧ್ಯೆ ಒಂದು ಆಶಾಕಿರಣವಾಗಿದೆ.

ಇದನ್ನು ಗುರುತಿಸಿದ ಶಾಸಕ ಗೋವಿಂದಗೌಡರು, ಇದೇ ತಾ॥ ನ ಕರಿಮನೆ ಭೂ ಅಭಿವೃದ್ಧಿ ಬ್ಯಾಂಕ್ ಕೂಡ ಉತ್ತಮ ಕೆಲಸ ನಿರ್ವಹಿಸುತ್ತಿದ್ದು, ಇಲ್ಲಿಗಿಂತಲೂ ಹೆಚ್ಚು ಸಾಧನೆಗಳನ್ನು ಮಾಡಿದೆ. ಹೀಗೆ, ಒಂದೇ ತಾ॥ ನಲ್ಲಿ ೨ ಉತ್ತಮ ಭೂ ಬ್ಯಾಂಕ್‌ಗಳಿರುವುದು ಇಡೀ ರಾಜ್ಯದಲ್ಲಿ ನಮ್ಮ ತಾ॥ ಮತ್ತು ಸಾಗರ ತಾ॥ ಗಳಲ್ಲಿ ಮಾತ್ರ ಎಂದರು.

ಈಚೆಗೆ ನಡೆದ ಬ್ಯಾಂಕಿನ ವಿಶೇಷ ಮಹಾಸಭೆಯಲ್ಲಿ ಭಾಗವಹಿಸಿದ್ದ ಅವರು, ಸರ್ಕಾರ ಕಳೆದ ವರ್ಷ ಕೃಷಿ ಸಾಲಗಳ ಮೇಲೆ ೪೫ ಕೋಟಿ ರೂ.ಗಳ ಬಡ್ಡಿ ರಿಯಾಯ್ತಿ ನೀಡಿದೆ ಎಂದು ಹೇಳಿ, ಈ ರಿಯಾಯ್ತಿಯ ಗಡುವನ್ನು ಬರುವ ಜನವರಿ ೩೧ರಿಂದ ಮಾರ್ಚ್ ಕೊನೆಯವರೆಗೆ ವಿಸ್ತರಿಸಬೇಕೆಂಬ ರೈತರ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುವ ಭರವಸೆ ನೀಡಿದರು.

ಬ್ಯಾಂಕಿನ ಅಧ್ಯಕ್ಷ ಯು.ಎಸ್. ಶಿವಪ್ಪ ಬ್ಯಾಂಕಿನ ಈವರೆಗಿನ ಸಾಧನೆಗಳನ್ನೂ ಮುಂದಿನ ಯೋಜನೆಗಳನ್ನೂ ವಿವರಿಸಿದರು ಈ ವರ್ಷ ರೈತರಿಂದ ಬಾಕಿ ವಸೂಲಾತಿ ಶೇ.೬೮ರಷ್ಟಾಗಿದ್ದು ೧ ಲಕ್ಷ ರೂ. ಲಾಭ ಬಂದಿದೆ. ಇನ್ನೂ ಬಾಕಿ ಇರುವ ೬ ಲಕ್ಷ ರೂ. ವಸೂಲಾದಲ್ಲಿ ೫-೧/೨ ಲಕ್ಷ ರೂ. ಲಾಭ ಗಳಿಕೆಯಾಗುತ್ತದೆ. ಸರ್ಕಾರದ ಬಡ್ಡಿ ರಿಯಾಯ್ತಿ ಮತ್ತಿತರ ಯೋಜನೆಗಳಿಂದಾಗಿ ಹೆಚ್ಚಿನ ಮರುಪಾವ್ತಿ ನಿರೀಕ್ಷಿಸಲಾಗಿದೆ ಎಂದರು.

ಬ್ಯಾಂಕಿನ ಯಾರಾದರೂ ನೌಕರರ ವಿರುದ್ಧ ಲಂಚ ಮತ್ತಿತರ ದೂರುಗಳಿದ್ದರೆ ಕೂಡಲೇ ನಿರ್ದೇಶಕರುಗಳಲ್ಲಿ ತಿಳಿಸಬೇಕೆಂದು ಕೋರಿದರು.

ಸಾಧನೆ–ಯೋಜನೆ

ಹಾಲಿ ೪೪ ಗ್ರಾಮಗಳ ವ್ಯಾಪ್ತಿ ಹೊಂದಿ ೨೬೫೦ ಸದಸ್ಯರನ್ನು ಹೊಂದಿರುವ ಬ್ಯಾಂಕು ಆ ಪೈಕಿ ೨೪೦೦ ಜನರಿಗೆ ವಿವಿಧ ಆರ್ಥಿಕ ಸೌಕರ್ಯಗಳನ್ನು ಒದಗಿಸಿದೆ. ದನದ ಕೊಟ್ಟಿಗೆ, ತಂತಿ ಬೇಲಿ, ಅಡಿಕೆ ತೋಟ ರಿಪೇರಿ, ಗೇಣಿದಾರರಿಗೆ ಗೇಣಿ ಜಮೀನಿನ ಹಕ್ಕು ಪಡೆಯಲು ಸೌಲಭ್ಯ, ಕಾಫಿ, ಮೆಣಸು, ತೆಂಗು, ಏಲಕ್ಕಿ, ನೀರಾವರಿ ಬಾವಿ, ಪಂಪ್ ಸೆಟ್, ಎತ್ತಿನಗಾಡಿ, ಎತ್ತು, ಪವರ್ ಟಿಲ್ಲರ್, ಟ್ರಾಕ್ಟರ್, ಹೈನುಗಾರಿಕೆ—ಮುಂತಾದ ವಿವಿಧ ಸೌಲಭ್ಯಗಳಿಗಾಗಿ ೮೩–೮೪ರಲ್ಲಿ ೧೭ ಲಕ್ಷ ರೂ. ಸಾಲ ನೀಡಿದ್ದು, ಈ ಸಾಲಿಗೆ ೩೨ ಲಕ್ಷ ರೂ. ಅಂದಾಜು ವೆಚ್ಚ ಯೋಜಿಸಲಾಗಿದೆ.

ಅಡಿಕೆ ಒಣಗಿಸುವ 'ಡ್ರೈಯರ್'

ಏಲಕ್ಕಿ ಮತ್ತು ಅಡಿಕೆ ಒಣಗಿಸುವ 'ಡ್ರೈಯರ್'ಗಳನ್ನು ಮಾಡಿಸಲು ಸೌಲಭ್ಯ ಒದಗಿಸುವ ಹೊಸ ಯೋಜನೆಯೊಂದು ಸಿದ್ಧವಾಗಿದ್ದು, ಈ ವರ್ಷ ಜಾರಿಗೆ ತರುವ ಉದ್ದೇಶವಿದೆ. ಹೆಚ್ಚಿನ ರೈತರು ಈ ಸೌಲಭ್ಯದ ಉಪಯೋಗ ಪಡೆದುಕೊಳ್ಳಬೇಕಾಗಿದೆ.

ತಿದ್ದುಪಡಿ ಅನುಮೋದನೆ

೧) ಬ್ಯಾಂಕಿನ ಹೆಸರನ್ನು 'ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್' ಎಂದು ಬದಲಾಯಿಸುವ; ಹಾಗೂ

೨) ಹರಿಜನ/ಗಿರಿಜನರಿಗೆ ಮತ್ತು ಮಹಿಳೆಯರಿಗೆ ಒಂದೊಂದು ಸ್ಥಾನವನ್ನು ಕ್ರಮವಾಗಿ ಹಿರೇಕೊಡಿಗೆ ಮತ್ತು ಚಾವಲ್ಮನೆ ಗ್ರೂಪ್‌ಗೆ ಮೀಸಲಿಡುವ

—ಬೈಲಾ ತಿದ್ದುಪಡಿಗಳನ್ನು (ಸರ್ಕಾರಿ ಆದೇಶದಂತೆ) ಅನುಮೋದಿಸಲಾಯಿತು.

ರೇಡಿಯೋ, ಟಿ. ವಿ. ಲೈಸೆನ್ಸ್ ಬಗ್ಗೆ ಸೂಚನೆ

ಚಿಕ್ಕಮಗಳೂರು: ರೇಡಿಯೋ ಮತ್ತು ದೂರದರ್ಶಕಗಳಿಗೆ ಪರವಾನಗಿ ಪಡೆಯದಿರುವವರು ಅಥವಾ ನವೀಕರಿಸದಿರುವವರು ಕೂಡಲೇ ಪಡೆಯಲು/ನವೀಕರಿಸಲು ಸೂಚಿಸಲಾಗಿದೆ. ಪರವಾನಗಿ ಬಗ್ಗೆ ಸೂಕ್ತ ದಾಖಲೆಯಿಲ್ಲದಿದ್ದಲ್ಲಿ ಸಹ ಒಂದು ವರ್ಷದ ಶುಲ್ಕ ಸಮನಾದ ದಂಡ ಕಟ್ಟಿ ಯಾವುದೇ ಅಂಚೆ ಕಚೇರಿಯಿಂದ ಪರವಾನಗಿ ಪಡೆಯಬಹುದೆಂದು ಅಂಚೆ ಇಲಾಖೆ ಅಧೀಕ್ಷಕರು ತಿಳಿಸಿದ್ದಾರೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ. ಶೃಂಗೇರಿ ಪ್ರತಿನಿಧಿ: ಕಲ್ಕುಳಿ ವಿಠಲಹೆಗ್ಡೆ